

ಕೈಹಿಡಿದು ಮುನ್ನಡೆಸಬಲ್ಲವು. 'ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್', 'ಐಸಿಐಸಿಐ ಡೈರೆಕ್ಟ್', 'ಜಿಯೋಜಿತ್' ಸಂಸ್ಥೆಗಳಿಗೆ ಈ ಕ್ಷೇತ್ರದಲ್ಲಿ ಉತ್ತಮ ಹೆಸರಿದೆ.

ಬ್ಯಾಂಕ್ ಖಾತೆ, ಪ್ಯಾನ್ ಕಾರ್ಡ್, ವಿಳಾಸ ಮತ್ತು ಗುರುತಿನ ಪುರಾವೆಗಳು ಡಿಮಾಟ್ ಖಾತೆ ತೆರೆಯಲು ಸಾಕು. ಆನ್‌ಲೈನ್‌ನಲ್ಲಿ ನಾವೇ ಡಿಮಾಟ್ ಖಾತೆ ತೆರೆದುಕೊಳ್ಳಲು ಹಲವು ಕಂಪನಿಗಳು ಅವಕಾಶ ಮಾಡಿಕೊಟ್ಟಿವೆ.

## ಹೇಗಿರಬೇಕು ಮೊದಲ ಹೆಜ್ಜೆಗಳು?

'ಗೂಳಿ ಓಡುವಾಗ ಬೆಕ್ಕು–ನಾಯಿಗಳೂ ಮಿಂಚುತ್ತವೆ. ಆದರೆ ಕರಡಿ ಕುಣಿಯುವಾಗ ಇವೇ ಬೆಕ್ಕು–ನಾಯಿಗಳು ಮತ್ತೆ ಮೇಲೇಳದಂತೆ ನೆಲ ಕಚ್ಚುತ್ತವೆ' ಎನ್ನುವುದು ಡಾ. ವಿ.ಕೆ. ವಿಜಯ್‌ಕುಮಾರ್ ಅವರ ಪ್ರಸಿದ್ಧ ವಾಕ್ಯ. ಜಿಯೊಜಿತ್ ಎಎಂಸಿಯ ಈ ಹೂಡಿಕೆ ತಜ್ಞನಿಗೆ ಷೇರುಪೇಟೆ ವಲಯದಲ್ಲಿ ದೊಡ್ಡಮಟ್ಟದ ಗೌರವವಿದೆ.

ಅವರ ಮಾತಿನಲ್ಲಿ ಪ್ರಸ್ತಾಪವಾಗುವ ಬೆಕ್ಕು–ನಾಯಿಗಳು ಎಂದರೆ ಮ್ಯಾನೇಜ್‌ಮೆಂಟ್ ಸರಿಯಿಲ್ಲದ, ನಷ್ಟದಲ್ಲಿ ಮುಳುಗಿರುವ, ಬ್ಯಾಲೆನ್ಸ್‌ಶೀಟ್ ನೆಲಕಚ್ಚಿರುವ ಕಂಪನಿಗಳು. ಇಂಥವನ್ನು ಪೇಟೆ ಮಾತಿನಲ್ಲಿ ಪೆನ್ನಿಸ್ಟಾಕ್‌ಗಳು ಎನ್ನುತ್ತಾರೆ. ವಹಿವಾಟು ಬೆಲೆ ಕಡಿಮೆಯಿರುವ ಕಾರಣ ಇಂಥ ಕಂಪನಿಗಳ ಷೇರುಗಳನ್ನು ಸಾಂಸ್ಥಿಕ ಹೂಡಿಕೆದಾರರು ಮುಟ್ಟುವುದಿಲ್ಲ. ಆದರೆ ಹೊಸಬರು ಇಂಥವನ್ನೇ ಟ್ರೇಡಿಂಗ್‌ಗೆ ಆರಿಸಿಕೊಳ್ಳುತ್ತಾರೆ. ಪ್ರತಿಬಾರಿ ಚಿಲ್ಲರೆ ವಹಿವಾಟುದಾರರು ದೊಡ್ಡಮಟ್ಟದಲ್ಲಿ ಮಾರುಕಟ್ಟೆಗೆ ಬಂದಾಗ ಇಂತಹ ಕಂಪನಿಗಳ ಬೆಲೆ ಗಮನಾರ್ಹ ಪ್ರಮಾಣದಲ್ಲಿ (ಐದಾರು ಪಟ್ಟು) ಹೆಚ್ಚುತ್ತದೆ. ಆದರೆ ಮಾರುಕಟ್ಟೆ ತನ್ನನ್ನು ತಾನು ಸರಿಪಡಿಸಿಕೊಂಡಾಗ (ಕರೆಕ್ಷನ್), ಈ ಕಂಪನಿಗಳ ತ್ರೈಮಾಸಿಕ ವರದಿಗಳು ಪ್ರಕಟವಾದಾಗ, ಯಾವುದಾದರೂ ಕೆಟ್ಟ ಸುದ್ದಿಯಿಂದ ದೊಡ್ಡ ಕಂಪನಿಗಳ ಮೌಲ್ಯ ಕುಸಿದಾಗ ಇಂಥ ಕಂಪನಿಗಳು ಅಕ್ಷರಶಃ ನೆಲಕಚ್ಚುತ್ತವೆ. ಹೂಡಿಕೆದಾರರ ಅಸಲಿನ ಜೊತೆಗೆ ಆಸಕ್ತಿಯೂ ಕರಗಿಹೋಗಿರುವ ನೂರಾರು ಉದಾಹರಣೆಗಳಿವೆ.

ನಮ್ಮ ಬಂಡವಾಳವನ್ನು ಸುರಕ್ಷಿತವಾಗಿ ಕಾಪಾಡಿಕೊಂಡು, ಒಂದಿಷ್ಟು ಲಾಭವನ್ನೂ ಗಳಿಸುವ ಸಾಧ್ಯತೆಯನ್ನು ವಿವರಿಸಿದವರು, ಷೇರುಗಳ ಟ್ರೇಡಿಂಗ್‌ನಲ್ಲಿ ತಕ್ಕಮಟ್ಟಿಗೆ ಲಾಭ ಕಂಡುಕೊಂಡಿರುವ ಶ್ರೀವತ್ಸ.

## ಅವರು ಹೇಳುವ ಕಿವಿಮಾತುಗಳಿವು

- ಡಿಮಾಟ್ ಅಕೌಂಟ್ ಓಪನ್ ಮಾಡಿದ್ದೀರಿ ಅಂದಾಕ್ಷಣ ಪ್ರತಿದಿನ ಟ್ರೇಡ್ ಮಾಡಲೇಬೇಕು ಅಂತೇನೂ ಇಲ್ಲ. ಪೇಟೆಯ ಮೂಡ್ ಗಮನಿಸಿ, ಟ್ರೇಡಿಂಗ್ ಬಗ್ಗೆ ನಿರ್ಧರಿಸಿ.
- ವಹಿವಾಟು ಮಾಡಬಹುದಾದ ಕಂಪನಿಗಳ ಒಂದು ಪಟ್ಟಿ ಸಿದ್ಧಪಡಿಸಿಕೊಳ್ಳಿ. ಅವುಗಳ ಬಗ್ಗೆ ಅಧ್ಯಯನ ಆರಂಭಿಸಿ.
- ಟ್ರೇಡಿಂಗ್ ನಿಮ್ಮ ಉದ್ದೇಶವಾಗಿದ್ದರೆ

## ಚಿನ್ನ ಮತ್ತು ವಿದೇಶಿ ಹೂಡಿಕೆ

ನಮ್ಮ ದೈನಂದಿನ ಬದುಕನ್ನು ಪ್ರಭಾವಿಸುವ ಗೂಗಲ್, ಅಮೆಜಾನ್, ಫೇಸ್‌ಬುಕ್, ಆಪಲ್ ಸೇರಿದಂತೆ ಹಲವು ಕಂಪನಿಗಳು ಭಾರತದಲ್ಲಿ ಷೇರುವಹಿವಾಟು ನಡೆಸುತ್ತಿಲ್ಲ. ಇಂಥ ಕಂಪನಿಗಳಲ್ಲಿ ಹೂಡಿಕೆ ಮಾಡಲು ಇಚ್ಛಿಸುವವರಿಗೆ ಮ್ಯೂಚುವಲ್ ಫಂಡ್‌ಗಳು ಉತ್ತಮ ಮಾರ್ಗ. ಮೋತಿಲಾಲ್ ಓಸ್ವಾಲ್, ಫ್ರಾಂಕ್ಲಿನ್ ಇಂಡಿಯಾ ಎಎಂಸಿಗಳ ಇಂಟರ್‌ನ್ಯಾಷನಲ್ ಫಂಡ್‌ಗಳು ಈಚೆಗೆ ಹೆಚ್ಚು ಜನಪ್ರಿಯವಾಗಿವೆ. ಪರಾಗ್ ಪರೀಖ್ ಎಎಂಸಿಯ ಮಲ್ಟಿ ಅಸೆಟ್ ಫಂಡ್ ನಮ್ಮ ದೇಶದ ಮತ್ತು ವಿದೇಶದ ಪ್ರಮುಖ ಕಂಪನಿಗಳಲ್ಲಿ ಹದವರಿತ ಹೂಡಿಕೆಗೆ ಅವಕಾಶ ನೀಡುತ್ತದೆ. ನಮ್ಮ ಒಟ್ಟು ಹೂಡಿಕೆಯ ಶೇ 10ರಷ್ಟು ಮಾತ್ರವೇ ವಿದೇಶಿ ನಿಧಿಗಳಲ್ಲಿ ಹೂಡಿಕೆ ಮಾಡಬೇಕು ಎಂದು ವೈಯಕ್ತಿಕ ಹಣಕಾಸು ತಜ್ಞರು ಸಲಹೆ ಮಾಡುತ್ತಾರೆ. ಇಂಥ ಹೂಡಿಕೆಗಳಲ್ಲಿ ರಿಸ್ಕ್ ಹೆಚ್ಚು, ತೆರಿಗೆ ನಿಯಮಗಳೂ ಬೇರೆಯ ರೀತಿಯಿವೆ.

ಒಟ್ಟು ಹೂಡಿಕೆ ಮೌಲ್ಯದ ಶೇ 10 ಸದಾ ಚಿನ್ನದ ಮೇಲೆ ತೊಡಗಿಸುವಂತೆ ಹಣಕಾಸು ಸಲಹೆಗಾರರು ಶಿಫಾರಸು ಮಾಡುತ್ತಾರೆ. ಇದು ನಮ್ಮ ಪೋರ್ಟ್‌ಫೋಲಿಯೊಗೆ ಸ್ಥಿರತೆ ತಂದುಕೊಡುತ್ತದೆ. ಭೌತಿಕ ಚಿನ್ನಕ್ಕಿಂತಲೂ ಮ್ಯೂಚುವಲ್ ಫಂಡ್, ಇಟಿಫ್ ಮತ್ತು ಗೋಲ್ಡ್ ಬಾಂಡ್‌ಗಳು ಇಂದು ಹೆಚ್ಚು ಜನಪ್ರಿಯ. ಎಸ್‌ಬಿಐ, ಯುಟಿಐ ಸೇರಿದಂತೆ ಬಹುತೇಕ ಎಲ್ಲ ಎಎಂಸಿಗಳೂ ಗೋಲ್ಡ್‌ಫಂಡ್ ಆರಂಭಿಸಿವೆ. ಎಕ್ಸ್‌ಪೆನ್ಸ್ ರೇಶ್ಯೋ (ನಿರ್ವಹಣಾ ಶುಲ್ಕ) ಕಡಿಮೆಯಿರುವ ಫಂಡ್‌ಗಳನ್ನು ಹೂಡಿಕೆಗೆ ಆರಿಸಿಕೊಳ್ಳಬೇಕು.